# ಅನುವಾದದಿಂದ ಸಂಸ್ಕೃತಿಯ ಪ್ರಸಾರ ಸಾಧ್ಯ




ಭಾರತೀಯ ವಿದ್ಯಾಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅನುವಾದ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ವಿಕ ಸುದ್ದಿಲೋಕ** ಬೆಂಗಳೂರು

"ಅನುವಾದ ಸಾಹಿತ್ಯದಲ್ಲಿ ಹಲವು ಸವಾಲುಗಳಿವೆ. ಅವುಗಳನ್ನು ಮೆಟ್ಟಿ ನಿಂತಾಗ ಮಾತ್ರ ಉತ್ತಮ ಅನುವಾದಿತ ಕೃತಿಗಳು ಹೊರಬರಲು ಸಾಧ್ಯ" ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

ಕೇಂದ್ರ ಸಾಹಿತ್ಯ ಅಕಾಡೆಮಿಯು ಭಾರತೀಯ ವಿದ್ಯಾಭವನದಲ್ಲಿ ಆಯೋಜಿಸಿದ್ದ 2023ನೇ ಸಾಲಿನ ಅನುವಾದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಂಬಾರ ಅವರು ಮಾತನಾಡಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷೆ ಕುಮುದ್ ಶರ್ಮಾ ಮಾತನಾಡಿದರು. ಅನುವಾದಕರಾದ ಕೆ.ಕೆ. ಗಂಗಾಧರನ್ (ಕನ್ನಡ), ಡಾ. ನಾಗರತ್ನ ಹೆಗ್ಡೆ (ಸಂಸ್ಕೃತ), ಪ್ರೊ. ರೀಟಾ ರಾಣಿ ಪಾಲಿವಾಲ್ (ಹಿಂದಿ), ಸುಚಿತ್ರಾ ಗಜಾನನ ಜೋಗ (ಕೊಂಕಣಿ) ಸೇರಿ ಆಯ್ಕೆಯಾದ ಎಲ್ಲರಿಗೂ ಅನುವಾದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್, ಕಾರ್ಯದರ್ಶಿ ಕೆ. ಶ್ರೀನಿವಾಸಮೂರ್ತಿ ಇದ್ದರು.